ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವರು ಯಾವುದಕ್ಕೂ ತಯಾರಿಲ್ಲ. ಎಲ್ಲವನ್ನೂ ಮುಚ್ಚಿಡುವ ಕೆಲಸ ಮಾಡುತ್ತಿದ್ದಾರೆ. ನಾವು ಬಾವಿಗೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಧರಣಿ ನಡೆಸಿದರು)

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಇದು ಇತಿಹಾಸದಲ್ಲಿ, ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ರಾಜ್ಯಪಾಲರ ಭಾಷಣಕ್ಕೆ ಮಾಡಿದಂತಹ ಅವಮಾನ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ರಾಜ್ಯಪಾಲರ ಭಾಷಣಕ್ಕೆ ಮಾಡಿದ ಅವಮಾನ, ಅಗೌರವ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಕರ್ನಾಟಕ ವಿಧಾನಸಭೆ ಇತಿಹಾಸದಲ್ಲಿ ರಾಜ್ಯಪಾಲರ ಭಾಷಣಕ್ಕೆ ಧರಣಿ ಮಾಡುತ್ತಿರುವವರು ಇವರೇ, ಬಿ.ಜೆ.ಪಿ. ಯವರು, ಬೇರೆ ಯಾರೂ ಕೂಡಾ ಮಾಡಿಲ್ಲ. ಇವರು ಹೇಳಿರುವ ಎಲ್ಲಾ ವಿಚಾರಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ನಮ್ಮಲ್ಲಿ ಯಾವುದೂ ಕೂಡಾ ಕಾನೂನು ಬಾಹಿರವಾಗಿ ಮಾಡಿಲ್ಲ. ಎಲ್ಲವನ್ನೂ ಕಾನೂನು ರೀತಿಯಲ್ಲಿಯೇ ಮಾಡಿದ್ದೇವೆ. ಆದುದರಿಂದ ನಾವು ಇದರಲ್ಲಿ ಯಾವುದೂ ಕೂಡಾ ಮುಚ್ಚುಮರೆ ಮಾಡುವುದು ಯಾವುದೂ ಇಲ್ಲ.

(ಗೊಂದಲ)